. ಶ್ರೀ ಬಿ.ಹೆಚ್. ಬನ್ನಿಕೋಡ್:– ಇದೊಂದು ಐತಿಹಾಸಿಕ ಸ್ಥಳವಿರುವುದರಿಂದ ಇದಕ್ಕೆ ಹಣದ ಕೊರತೆ ಇದೆ ಎಂದು ಹೇಳುವುದು ಸರಿಯಲ್ಲ. ಮಾನ್ಯ ಮುಖ್ಯಮಂತ್ರಿಗಳ ಪತ್ರ ನನಗೂ ಕೂಡ ಬಂದಿದೆ. ಆ ಪತ್ರದ ಮೂಲಕ 1993–94ರಲ್ಲಿ ಈ ಕೆಲಸವನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳಿದ್ದನ್ನು ನಾನು ಗಮನಿಸಿದ್ದೇನೆ. ಆದ್ದರಿಂದ ತಮ್ಮಲ್ಲಿ ಕೂಡ ಈ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಮೂಡಿಗೆರೆ ತಾಲ್ಲೂಕಿನಲ್ಲಿ ಕೆರೆಗಳ ಹಾಗೂ ಅಣೆಕಟ್ಟುಗಳ ಸಂಖ್ಯೆ

380 (246): ಶ್ರೀಮತಿ ಮೋಟಮ್ಮ (ಮೂಡಿಗೆರೆ):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟಿರುವ ಕೆರೆಗಳ ಹಾಗೂ ಅಣೆಕಟ್ಟುಗಳ ಸಂಖ್ಯೆ ಎಷ್ಟು; (ವಿವರವನ್ನು ಒದಗಿಸುವುದು);

ಆ) ಅವುಗಳಲ್ಲಿ ಎಷ್ಟು ಕೆರೆ, ಅಣೆಕಟ್ಟುಗಳ ದುರಸ್ತಿ ಕಾರ್ಯ ಮಾಡಲಾಗುತ್ತಿದೆ;

ಇ) ಅಂಗಡಿ ದೊಡ್ಡಕೆರೆ ದುರಸ್ತಿ ಮಾಡದಿರಲು ಕಾರಣವೇನು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು):–

ಅ) 5 ಕೆರೆಗಳು ಮತ್ತು 7 ಅಣೆಕಟ್ಟುಗಳಿವೆ.

ಕೆರೆಗಳು

1. ಕಾವರೆಗೆ ಗ್ರಾಮದ ಭೈದರ್‌ಹಳ್ಳಿ ಕೆರೆ
2. ಲೋಕುವಳ್ಳಿ ಗ್ರಾಮದ ಉಡುಕಿರನ ಕೆರೆ
3. ಲೋಕುವಳ್ಳಿ ಗ್ರಾಮದ ಉಂಡುಮಾರಮ್ಮನ ಕೆರೆ
4. ಅಂಗಡಿ ಗ್ರಾಮದ ದೊಡ್ಡಕೆರೆ
5. ದಾರದ ಹಳ್ಳಿ ಜೋಗಣ್ಣನ ಕೆರೆ ದೇವಿ ಕೆರೆ

ಅಣೆಕಟ್ಟುಗಳು

1. ಜಾಸಾನ್ ಗ್ರಾಮದ ತಲಗೋಡು ಪಿಕ್‌ಅಪ್
2. ಮಗ್ಗಲಮಕ್ಕಿ ಪಿಕ್‌ಅಪ್
3. ಹೊರಟ್ಟಿ ಪಿಕ್‌ಅಪ್
4. ಇಡಕಣಿ ಪಿಕ್‌ಅಪ್
5. ಮುರಡನ ಕೆರೆ ಅಣೆಕಟ್ಟು
6. ಕೂವೇ ಅಣೆಕಟ್ಟು
7. ಹೆಸಕಲ್ ಪಿಕ್‌ಅಪ್

ಆ) ಒಂದು ಅಣೆಕಟ್ಟಿನ ದುರಸ್ತಿ ನಡೆಯುತ್ತಿದೆ.

ಇ) ಈ ಕೆರೆಯು ಡಿಸೆಂಬರ್ 1992ರಲ್ಲಿ ಜಿಲ್ಲಾಪರಿಷತ್‌ನಿಂದ ಸಣ್ಣ ನೀರಾವರಿ ವಲಯಕ್ಕೆ ಹಸ್ತಾಂತರಗೊಂಡಿದೆ. ಪರಿವೀಕ್ಷಣೆ ನಂತರ, ದುರಸ್ತಿಯ ಅವಶ್ಯಕತೆಯನ್ನು ಪರಿಶೀಲಿಸಲಾಗುವುದು.

ಶ್ರೀಮತಿ ಮೋಟಮ್ಮ:– ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ನಮ್ಮಲ್ಲಿ 5 ಕೆರೆಗಳು, 7 ಅಣೆಕಟ್ಟುಗಳು ಸಣ್ಣ ನೀರಾವರಿ ಇಲಾಖೆಗೆ ಬರುತ್ತದೆಂದು ಹೇಳಿದ್ದಾರೆ. ಅದರಲ್ಲಿ ಇದುವರೆಗೂ ಒಂದೇ ಒಂದು ಅಣೆಕಟ್ಟಿನ ದುರಸ್ತಿಯನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಅದು ಯಾವ ಅಣೆಕಟ್ಟಿನ ಕೆಲಸ ಎಂದು ಹೇಳಬೇಕು. ಜಿಲ್ಲಾಪರಿಷತ್ತಿನಿಂದ ಕೆಲವು ನೀರಾವರಿ ಕಾಮಗಾರಿಗಳು ಮೈನರ್ ಇರಿಗೇಷನ್‌ಗೆ ವರ್ಗಾವಣೆಯಾಗಿ ಬಂದಿದೆ. ಅಂಥವುಗಳಲ್ಲಿ ಕೆಲವು ವರ್ಕ್ ಜಿಲ್ಲಾಪರಿಷತ್ತಿನ ಇಂಜಿನಿಯರಿಂಗ್ ಇಲಾಖೆಯಲ್ಲಿ, ನೀರಾವರಿ ಇಲಾಖೆಯಲ್ಲಿ ಸೇರಿದೆ. ಅದರಲ್ಲಿ ಇಲ್ಲಿ ಅವರು ಹೇಳಿರುವ ದಾರದಹಳ್ಳಿ ಹತ್ತಿರದ ಜೋಗಣ ಕೆರೆ, ದೇವಿ ಕೆರೆ, ಅದಕ್ಕೆ 7 ಲಕ್ಷ ರೂಪಾಯಿಗೆ ಜಿಲ್ಲಾಪರಿಷತ್ತಿನಲ್ಲಿ ಈ ನೀರಾವರಿ ಕಾಮಗಾರಿಯಲ್ಲಿ ಸೇರಿತ್ತು. ಅದು ನಿಮ್ಮ ಸಣ್ಣ ನೀರಾವರಿ ಇಲಾಖೆಗೆ ಬಂದ ಮೇಲೆ ಅದರ ಕೆಲಸವನ್ನು ತೆಗೆದುಕೊಂಡಿಲ್ಲ. ಕಾರಣ ಏನು ಎನ್ನುವುದು ಬೇಕು ?

ಡಾ।। ಆರ್.ಬಿ. ಚೌಧುರಿ:– ಮಾನ್ಯ ಅಧ್ಯಕ್ಷರೆ, ಈ ಕೆರೆಗಳು ಮತ್ತು ಅಣೆಕಟ್ಟುಗಳನ್ನು ನಮ್ಮ ಇಲಾಖೆಗೆ ವಹಿಸಿಕೊಂಡಿದ್ದು ಎಷ್ಟೆಂದರೆ 5 ಕೆರೆಗಳು ಮತ್ತು 5 ಅಣೆಕಟ್ಟುಗಳು. ಅದರಲ್ಲಿ ಮೊದಲೆ 2 ಅಣೆಕಟ್ಟುಗಳು ನಮ್ಮ ಇಲಾಖೆಗೆ ಸೇರಿದವು. ಅವು ಯಾವುವೆಂದರೆ, ಮುರುಡಸ ಕೆರೆ ಅಣೆಕಟ್ಟು ಮತ್ತು ಕೂವೆ ಅಣೆಕಟ್ಟು. ಈಗ ನಮ್ಮ ಇಲಾಖೆಯ ವತಿಯಿಂದ ಕೂವೆ ಅಣೆಕಟ್ಟಿನ ಕೆಲಸ ಮಾತ್ರ ನಡೆದಿದೆ. ಹಾಗೂ ಇನ್ನು ಕೆಲವು ಕೆರಗಳು ಮತ್ತು ಅಣೆಕಟ್ಟುಗಳನ್ನು ಜಿಲ್ಲಾಪರಿಷತ್ತಿನಿಂದ ನಮ್ಮ ಇಲಾಖೆಗೆ ವರ್ಗಾಯಿಸಲಾಗಿದ್ದು. ಆದರೆ ಕೇವಲ ಅಣೆಕಟ್ಟು ಮತ್ತು ಕೆರೆಗಳನ್ನು ಮಾತ್ರ ಕೊಟ್ಟು ಅನುದಾನವನ್ನು ಅದರ ಜೊತೆಯಲ್ಲಿ ಕೊಟ್ಟಿಲ್ಲ. ಆದ್ದರಿಂದ ಕೆಲವೊಂದು ಕೆರೆಗಳ ಮತ್ತು ಅಣೆಕಟ್ಟುಗಳ ಕೆಲಸ ಇನ್ನು ನಮ್ಮ ಇಲಾಖೆಯ ವತಿಯಿಂದ ಕೈಗೊಳ್ಳಲಾಗಲಿಲ್ಲ.

ಶ್ರೀಮತಿ ಮೋಟಮ್ಮ:– ಮಾನ್ಯ ಅಧ್ಯಕ್ಷರು, ಅದು ಬಹಳ ಅನ್ಯಾಯ ಎಂದು ಅನ್ನಿಸುತ್ತದೆ. ಏಕೆಂದರೆ ಜಿಲ್ಲಾಪರಿಷತ್ತಿನಲ್ಲಿ ಅದು ನೀರಾವರಿಯಲ್ಲಿ ಸೇರಿ 7 ಲಕ್ಷ ರೂಪಾಯಿಯನ್ನು ಅಳವಡಿಸಿ ಇವರ ಇಲಾಖೆಗೆ ವರ್ಗಾವಣೆಯಾದ ಮೇಲೆ ನಮಗೆ ಹಣವನ್ನು ಕೊಟ್ಟಿಲ್ಲ ಕೈಬಿಟ್ಟಿದ್ದೇವೆಂದು ಹೇಳಿದರೆ ಕೆಲಸ ವರ್ಗಾವಣೆಯಾದ ಮೇಲೆ ಅದಕ್ಕೆ ಇಟ್ಟಿದ್ದ ಹಣವನ್ನು ಪತಕ್ಕೆ ಇವರು ಕೇಳಲಿಲ್ಲ. ಅಥವಾ ತಮ್ಮ ಇಲಾಖೆಯಿಂದ ಪತಕ್ಕೆ ಹಣವನ್ನು ಒದಗಿಸಿ ಆ ಕೆಲಸವನ್ನು ಮಾಡಲಿಲ್ಲ. ಈ ತರಹ ಬಹಳ ಕಡೆ ಆಗಿರಬಹುದು ಏಕೆಂದರೆ ಎಲ್ಲಾ ಶಾಸಕರ ಕ್ಷೇತ್ರದಲ್ಲಿಯೂ ಈ ತರಹ ಜಿಲ್ಲಾಪರಿಷತ್ತಿನಲ್ಲಿದ್ದ ನೀರಾವರಿ ಕಾಮಗಾರಿಗಳು ಮೈನರ್ ಇರಿಗೇಷನ್‌ಗೆ ಬಂದಿವೆ. ಹಾಗಿದ್ದರೆ ಈ ವರ್ಷ ನಮ್ಮ ಮೈನರ್ ಇರಿಗೇಷನ್‌ನಿಂದ ಆಗಬೇಕಾದಂತಹ ಕೆಲಸಗಳಿಗೆ ತೊಂದರೆ ಆಗಲಿಲ್ಲವೇ ? ಅನ್ಯಾಯವಾಗಲಿಲ್ಲವೇ ? ಇದನ್ನು ಹೇಗೆ ಸರಿಪಡಿಸುತ್ತೀರಿ ? 7 ಲಕ್ಷ ರೂಪಾಯಿಯನ್ನು ನೀವು ಹೇಗೆ ಕೂಡಿಸಿಕೊಟ್ಟು ದೇವಿ – ಕೆರೆ ರಿಪೇರಿ ಮಾಡುತ್ತೀರಿ ಎನ್ನುವುದನ್ನು ಸ್ಪಷ್ಟಪಡಿಸಬೇಕು.

ಡಾ।। ಆರ್.ಬಿ. ಚೌಧುರಿ:– ಇದನ್ನು 1992ನೇ ಡಿಸೆಂಬರ್‌ನಲ್ಲಿ ನಮ್ಮ ಇಲಾಖೆಗೆ ಕೊಟ್ಟಿದ್ದರಿಂದ, ಬಜೆಟ್ ಪ್ರಾವಿಜನ್ ಹೇಗೆ ಇದೆ ಎನ್ನುವುದನ್ನು ನೋಡಿಕೊಂಡು ನಾವು ಆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ.

ಶ್ರೀಮತಿ ಮೋಟಮ್ಮ:– ಅದಕ್ಕೆ ಇಟ್ಟ ಹಣ ಏನಾಯಿತು ಎನ್ನುವುದು ಬೇಕು. ಜಿಲ್ಲಾ ಪರಿಷತ್ತಿನಲ್ಲಿ ಉಳಿದಿದೆಯೋ ? ಅಥವಾ ನಿಮಗೆ ಬಂದಿದೆಯೋ ? ಇದೊಂದೇ ಕಾಮಗಾರಿಯ ಪ್ರಶ್ನೆಯನ್ನು ನಾನು ಹೇಳುತ್ತಿಲ್ಲ.

ಡಾ।। ಆರ್.ಬಿ. ಚೌಧುರಿ:– ಜಿಲ್ಲಾಪರಿಷತ್ತಿನಿಂದ ಕೆಲವೊಂದು ಕೆರೆಗಳಿಗೆ ಹಣ ಏನಿದೆ ಹಾಗೆಯೇ ಕೊಟ್ಟಿದ್ದಾರೆ. ಜಿಲ್ಲಾಪರಿಷತ್ತಿನವರಿಗೆ ಅನುದಾನವನ್ನು ಬಿಡುಗಡೆ ಮಾಡಿಲ್ಲ. ತಾವು ಯಾವ ಕೆರೆಯ ಬಗ್ಗೆ ಹೇಳುತ್ತೀರಿ ?

ಶ್ರೀಮತಿ ಮೋಟಮ್ಮ:– ಜಿಲ್ಲಾಪರಿಷತ್ತಿನಿಂದ ತುಂಬ ವರ್ಕ್ಸ್ ಬೇರೆ ಬೇರೆ ಕ್ಷೇತ್ರಗಳಿಂದಲೂ ವರ್ಗಾವಣೆಯಾಗಿದೆ. ಇದೇ ರೀತಿ ಕಾಮಗಾರಿಗಳನ್ನು ಮಾತ್ರ ವಹಿಸಿಕೊಂಡು ಅದಕ್ಕೆ ಜಿಲ್ಲಾ ಪರಿಷತ್ತಿನಲ್ಲಿ ಇಟ್ಟಂತಹ ಹಣವನ್ನು ನೀವು ಖರ್ಚು ಮಾಡದಿದ್ದರೆ ಆ ಹಣ ಜಿಲ್ಲಾಪರಿಷತ್ತಿನಲ್ಲಿ ಉಳಿದಿದೆಯೋ ? ಅಥವಾ ವಾಪಸ್ಸು ಹೋಗಿದೆಯೋ ? ಅದನ್ನು ಖರ್ಚು ಮಾಡುತ್ತೀರೋ ಬಿಡುತ್ತೀರೋ ಎನ್ನುವುದು ಬೇಕು.

ಡಾ।। ಆರ್.ಬಿ. ಚೌಧುರಿ:– ದೇವಿಕೆರೆಯ ಅನುದಾನದ ವರ್ಗಾವಣೆಯ ಬಗ್ಗೆ ಪತ್ರ ವ್ಯವಹಾರ ಇನ್ನೂ ನಡೆಯುತ್ತಿದೆ. ಅನುದಾನವನ್ನು ನಮಗೆ ಕೊಟ್ಟಿಲ್ಲ. ಈಗ ಜಿಲ್ಲಾಪರಿಷತ್ತಿನವರು ದೇವಿಕೆರೆಯ ಕೆಲಸ.....

ಶ್ರೀಮತಿ ಮೋಟಮ್ಮ:– ನಾನು ಹೇಳಿದ್ದು ಅವರಿಗೆ ಅರ್ಥವಾಗಿಲ್ಲ. ನಿಮಗೆ ಕೊಟ್ಟಿಲ್ಲ ಅನ್ನುವುದು ನಮಗೂ ಗೊತ್ತಾಯಿತು. ಆದರೆ ಹೇಗೆ ತೆಗೆದುಕೊಳ್ಳುತ್ತೀರಿ, ಖರ್ಚು ಹೇಗೆ ಮಾಡುತ್ತೀರಿ ? ಇದರಿಂದ ನಮ್ಮ ಕ್ಷೇತ್ರದ ಕೆಲಸಗಳಿಗೆ ಅನ್ಯಾಯವಾಗಲಿಲ್ಲವೇ. ತೊಂದರೆಯಾಗಲಿಲ್ಲವೇ ?

ಡಾ।। ಆರ್.ಬಿ. ಚೌಧುರಿ:– ತೊಂದರೆಯಾಗಿದೆ, ಅದರ ಪರಿಶೀಲನೆ ನಡೆದಿದೆ. ಯಾವ ತರಹ ತೆಗೆದುಕೊಳ್ಳಬೇಕೆಂಬ ಬಗ್ಗೆ ಪರಿಶೀಲನೆ ನಡೆದಿದೆ. ಜಿಲ್ಲಾಪರಿಷತ್ತಿನವರು ಕೊಡುತ್ತಿಲ್ಲ, ತಾವೂ ಮಾಡುತ್ತಿಲ್ಲ.

ಶ್ರೀ ಕೆ.ಹೆಚ್. ರಂಗನಾಥ್:– 226(1407)ನೇ ಪ್ರಶ್ನೆಗೆ ಜಿಲ್ಲಾಪರಿಷತ್ತಿನಿಂದ ಉತ್ತರ ಬರಬೇಕಾದೆ. ಒಂದು ವಾರ ತಾವು ಕಾಲಾವಕಾಶವನ್ನು ಕೊಡಿ.

ಕನಕಪುರ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆ

228 (1335): ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು):–

ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಕಪುರ ತಾಲ್ಲೂಕಿನಲ್ಲಿ ಗಂಗಾಕಲ್ಯಾಣ ಯೋಜನೆ ಅನುಷ್ಠಾನವು ಯಾವ ಇಲಾಖೆ ಮುಖಾಂತರ ನಡೆಯುತ್ತಿದೆ ಮತ್ತು ಯಾವ ಯಾವ ಗ್ರಾಮಗಳಲ್ಲಿ ಸರ್ಕಾರವು ಗಂಗಾಕಲ್ಯಾಣ ಯೋಜನೆ ತೆಗೆದುಕೊಂಡಿದೆ;

ಆ) 1985–86ರಿಂದ ಇಲ್ಲಿಯವರೆಗೆ ಪ್ರತಿವರ್ಷಗಳ ಪ್ರಕಾರ ವಿವರ ಒದಗಿಸುವುದು;

ಇ) ಈ ಯೋಜನೆಗೆ ಮಂಜೂರಾಗಿರುವ ಸ್ಥಳಗಳಾವುವು; ಎಷ್ಟು ಯೋಜನೆಗಳು ಕಾರ್ಯರೂಪದಲ್ಲಿವೆ ಹಾಗೂ ಕಾರ್ಯಾಚರಣೆ ಇಲ್ಲದೆ ಸ್ಥಗಿತಗೊಂಡಿರುವ ಯೋಜನೆಗಳೆಷ್ಟು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಜಿಲ್ಲಾಪರಿಷತ್ತಿನಿಂದ ನಡೆಯುತ್ತಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಇ) ಅ) ಮಂಜೂರಾದ ಸ್ಥಳಗಳ ಸಂಖ್ಯೆ	47
ಆ) ಕಾರ್ಯರೂಪದಲ್ಲಿರುವ ಯೋಜನೆಗಳ ಸಂಖ್ಯೆ	20
ಇ) ವಿಫಲಗೊಂಡ ಯೋಜನೆಗಳ ಸಂಖ್ಯೆ	22
ಈ) ಪ್ರಾರಂಭಿಸಬೇಕಾಗಿರುವ ಯೋಜನೆಗಳ ಸಂಖ್ಯೆ	5